# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

## ಸಿ.ಸಿ. ನಂ.182/2011

CW-1/PW-3

| | | |
|---|---|---|
| ಹೆಸರು | :- | ಎಲ್.ಕಿಶೋರ್ |
| ತಂದೆ ಹೆಸರು | :- | ಲೇಟ್ ಜೆ.ಲಕ್ಷ್ಮಣ್ ಪ್ರಸಾದ್ |
| ವಯಸ್ಸು | :- | 62 ವರ್ಷ |
| ವೃತ್ತಿ | :- | ಖಾಸಗಿ |
| ವಾಸ ಸ್ಥಳ | :- | ರಾಮನಗರ |
| ದಿನಾಂಕ | :- | 01.12.2022 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ :

ನಾನು 2005 ರಿಂದ ಬಾಲಾಜಿ ಡಿಲಕ್ಸ್ ಲಾಡ್ಜನ್ನು ನಡೆಸುತ್ತಿದ್ದು, ಸುಮಾರು 10-11 ವರ್ಷಗಳ ಹಿಂದೆ ನಾನು ಮಧ್ಯಾಹ್ನ 2.00 ಗಂಟೆಗೆ ಮನೆಗೆ ಊಟಕ್ಕೆ ಹೋಗಿ 4.00 ಗಂಟೆಗೆ ವಾಪಸ್ ಆಗಿದ್ದು, ಮಧ್ಯಾಹ್ನ 3.30 ರ ಸಮಯದಲ್ಲಿ 4 ಜನ ಆಸಾಮಿಗಳು ನಮ್ಮ ಲಾಡ್ಜ್ ಗೆ ಬಂದು ರೂಂ ನಂ.114 ನ್ನು ಪಡೆದುಕೊಂಡಿದ್ದರು. ಸದರಿಯವರು ತಮ್ಮ ವಿಳಾಸದ ದೃಢೀಕರಣಕ್ಕಾಗಿ ತಮ್ಮ ಚುನಾವಣಾ ಗುರುತಿನ ಚೀಟಿಗಳನ್ನು ಕೊಟ್ಟಿದ್ದರು ಹಾಗೂ ಸದರಿಯವರು 4 ದಿನಗಳು ರೂಮಿನಲ್ಲಿ ಇರುವುದಾಗಿ ತಿಳಿಸಿದ್ದರು. ಪ್ರತಿ ದಿನಕ್ಕೆ 600/- ರೂಗಳ ಬಾಡಿಗೆಯಂತೆ 1,500/- ರೂಗಳ ಮುಂಗಡ ಹಣವನ್ನು ಪಾವತಿಸಿದ್ದರು. ನಾನು 4.00 ಗಂಟೆಗೆ ವಾಪಸ್ಸಾಗಿ ರೂಮಿನಲ್ಲಿ ಬಾಡಿಗೆಗೆ ಯಾರಿದ್ದಾರೆ ಎಂದು ವಿಚಾರಿಸಿದಾಗ ಸದರಿ 4 ಜನ ಆಸಾಮಿಗಳು ಬಾಡಿಗೆಗೆ ಬಂದಿರುವ ವಿಚಾರ ಗೊತ್ತಾಯಿತು. ಸದರಿಯವರು ಪಾವತಿಸಿದ್ದ 1,500/- ರೂಗಳನ್ನು

ನಮ್ಮ ನೋಟ್ ಮಷಿನ್‌ನಲ್ಲಿ ಪರಿಶೀಲಿಸಲಾಗಿ ಅದರ ಪೈಕಿ 500/- ರೂಗಳ 2 ನೋಟುಗಳು ಖೋಟಾ ನೋಟುಗಳಾಗಿದ್ದವು ಎಂದು ನನಗೆ ತಿಳಿದು ಬಂದಿತು. ಕೂಡಲೇ ನಾನು ಐಜೂರು ಠಾಣೆಗೆ ಹೋಗಿ ಈ ಕುರಿತು ದೂರನ್ನು ಕೊಟ್ಟೆನು. ಸದರಿ ದೂರಿನ ದೃಢೀಕೃತ ನಕಲನ್ನು ಹಾಗೂ ಅದರಲ್ಲಿನ ನನ್ನ ಸಹಿಯನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ದೂರಿನ ದೃಢೀಕೃತ ನಕಲನ್ನು **ನಿಪಿ-5** ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ-5(ಎ)** ಎಂದು ಗುರುತಿಸಲಾಯಿತು. ನನಗೆ ಸಿಕ್ಕಂತಹ 2 ಖೋಟಾ ನೋಟುಗಳನ್ನು ನಾನು ಪೊಲೀಸ್ ಠಾಣೆಯಲ್ಲಿ ಒಪ್ಪಿಸಿದೆನು.

2. ನಾನು ಠಾಣೆಯಲ್ಲಿ ಖೋಟಾ ನೋಟುಗಳನ್ನು ಹಾಜರುಪಡಿಸಿದ್ದು, ಆ ಸಮಯದಲ್ಲಿ ಪೊಲೀಸ್ ಠಾಣೆಯಲ್ಲಿ ನನ್ನ ಸಮಕ್ಷಮ ಅಮಾನತು ಪಂಚನಾಮೆ ಕ್ರಮವನ್ನು ಜರುಗಿಸಿದ್ದು, ಅದಕ್ಕೆ ನನ್ನ ಸಹಿಯನ್ನು ಪಡೆದುಕೊಳ್ಳಲಾಯಿತು. ಸದರಿ ಅಮಾನತು ಪಂಚನಾಮೆಯ ದೃಢೀಕೃತ ನಕಲನ್ನು ಹಾಗೂ ಅದರಲ್ಲಿನ ನನ್ನ ಸಹಿಯನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ಅಮಾನತು ಪಂಚನಾಮೆಯ ದೃಢೀಕೃತ ನಕಲನ್ನು **ನಿಪಿ-6** ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಲಾಯಿತು.

3. ನಾನು ಠಾಣೆಯಲ್ಲಿ ದೂರನ್ನು ದಾಖಲಿಸಿದ ನಂತರ ಪೊಲೀಸರು ನಮ್ಮ ಲಾಡ್ಜಿಗೆ ಬಂದು ನಾನು ತೋರಿಸಿದ ನಮ್ಮ ಲಾಡ್ಜಿನ ಕೊಠಡಿಯ ಬಳಿ ಬಂದು ಸದರಿ 3-4 ಜನರನ್ನು ವಿಚಾರಣೆ ಮಾಡಿದರು. ಸದರಿ ಆಸಾಮಿಗಳ ಬಳಿ ಇನ್ನು ಖೋಟಾ ನೋಟುಗಳಿದ್ದು ಅದನ್ನು ಪೊಲೀಸರು

ಅಮಾನತುಪಡಿಸಿಕೊಂಡರು. ಆ ಸಮಯದಲ್ಲಿ ಪೊಲೀಸರು ಸ್ಥಳದಲ್ಲಿ ಸ್ಥಳ ಹಾಗೂ ಅಮಾನತು ಪಂಚನಾಮೆ ಕ್ರಮ ಜರುಗಿಸಿದ್ದು, ಸದರಿ ಸ್ಥಳದ ಹಾಗೂ ಅಮಾನತು ಪಂಚನಾಮೆ ದೃಢೀಕೃತ ನಕಲನ್ನು ಹಾಗೂ ಹಾಗೂ ಅದರಲ್ಲಿನ ನನ್ನ ಸಹಿಯನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸ್ಥಳ ಹಾಗೂ ಅಮಾನತು ಪಂಚನಾಮೆಯ ದೃಢೀಕೃತ ನಕಲನ್ನು **ನಿಪಿ-**7 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ-**7**(ಎ)** ಎಂದು ಗುರುತಿಸಲಾಯಿತು.

4. ನಂತರ ಪೊಲೀಸರು 4 ಜನ ಆಸಾಮಿಗಳನ್ನು ಅವರೊಂದಿಗೆ ಠಾಣೆಗೆ ಕರೆದುಕೊಂಡು ಹೋದರು. ಸದರಿ 4 ಜನ ಆಸಾಮಿಗಳ ಹೆಸರುಗಳನ್ನು ಹೇಳಲು ನನಗೆ ನೆನಪಿಲ್ಲ. ಸದರಿ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ನನ್ನ ಸಮಕ್ಷಮ ಸದರಿ ಆಸಾಮಿಗಳಿಂದ ಪೊಲೀಸರು ಅಮಾನತುಪಡಿಸಿಕೊಂಡ ಖೋಟಾ ನೋಟುಗಳನ್ನು ಹಾಗೂ ಆರೋಪಿಗಳು ನಮ್ಮ ಲಾಡ್ಜಿನಲ್ಲಿ ನೀಡಿದ್ದ 2 ಖೋಟಾ ನೋಟುಗಳನ್ನು ಈಗ ನೋಡಿದರೆ ಗುರುತಿಸಲು ಅನುಮಾನವಿರುತ್ತದೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ರಾಮನಗರದ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.